ಆ) ಸದರಿ ನೀರಾವರಿ ಯೋಜನೆಯಡಿಯಲ್ಲಿ ಬರತಕ್ಕ ರೈತರಿಗೆ ಬಹಳ ಹಾನಿ ಸರಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸದರಿ ಸೋರುತ್ತಿರುವ ಪೈಪುಗಳನ್ನು ದುರಸ್ತಿಗೊಳಿಸುವ ಬಗ್ಗೆ ಸರಕಾರದವರು ಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡ ಮತ್ತು ನೀರಾವರಿ ಮಂತ್ರಿಗಳು).—

ಅ) ಬಂದಿದೆ.

ಆ) ಬಂದಿದೆ.

ಇ) ಈ ಕೆಲಸವನ್ನು ಸಹಕಾರ ಸಂಘದವರು "ಟರ್ನ್ ಕೀ" ಆಧಾರದ ಮೇಲೆ ಮೇವೋಲ್ಟಾಸ್ ಕಂಪನಿಯವರಿಗೆ ನಿರ್ವಹಿಸಿರುತ್ತಾರೆ. ಹಾಕಿದ ಪೈಪುಗಳಲ್ಲಿ ಸೋರುವಿಕೆಯನ್ನು ತಡೆಗಟ್ಟುವ ಕಾರ್ಯವು ಕಂಪನಿಯವರ ಜವಾಬ್ದಾರಿಯಾಗಿರುತ್ತದೆ. ಮತ್ತು ನಿಯಮಾವಳಿ ಪ್ರಕಾರ ಕಂಪನಿಯವರ ಮೇಲೆ ಕ್ರಮ ಕೈಗೊಳ್ಳಲಾಗುವುದು.

೧೯೭೮ರಲ್ಲಿ ಈ ಸಹಕಾರ ಸಂಘ ಹೇಗೆ ಕಾರ್ಯ ನಿರ್ವಹಣೆ ಮಾಡಿದೆ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಇದು ಕೊಆಪರೇಟೀವ್ ಲಿಫ್ಟ್ ಇರಿಗೇಷನ್ ಸ್ಕೀಂ. ಪೈಪುಗಳ ಸೋರುವಿಕೆಯಲ್ಲಿ ದೋಷಗಳಿವೆ, ಇದನ್ನು ಸರಿಪಡಿಸಲ್ಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಶ್ರೀರಂಗದೇವರಾಯಲು.—ಈಗ ಲಕ್ಷಾಂತರ ರೂಪಾಯಿ ಕರೆಂಟ್ ಚಾರ್ಜ್ ಕೊಡಬೇಕಾಗಿದೆ. ಇದು ಸಾವಿರಾರು ರೈತರ ಮೇಲೆ ಹೊರೆಯಾಗಿದೆ. ಆದುದರಿಂದ ಇದನ್ನು ಆದಷ್ಟು ತೀವ್ರವಾಗಿ ಮಾಡಿಸಬೇಕೆಂದು ತಮ್ಮ ಮುಖೇನ ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಕೊಆಪರೇಟೀವ್ ಸೆಕ್ಟಾರಿನಲ್ಲಿರತಕ್ಕ ಈ ಒಂದು ಲಿಫ್ಟ್ ಇರಿಗೇಷನ್ ಸ್ಕೀಂ ೧೯೭೭-೭೮ರಲ್ಲಿ ಕೆಲಸ ಮಾಡಿತ್ತು. ಆ ಕೆಲಸದಲ್ಲಿ ದೋಷವಿದೆ ಎಂದು ಗೊತ್ತಾಗಿ ೧೩೨ ಕಡೆ ತೂತಾಗಿದೆ ಎಂದು ರಿಪೋರ್ಟ್ ಇದೆ. ಇದನ್ನು ಸರಿಪಡಿಸಲಿಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಹಿರಿಯೂರು ತಾಲ್ಲೂಕಿನಲ್ಲಿರುವ ಸುವರ್ಣಮುಖಿ ಸೇತುವೆ ಮೇಲೆ ಹಾಯ್ದು ಹೋಗುವ ಎಲ್ಲಾ ವಾಹನಗಳಿಂದ ತೆರಿಗೆಯ ವಸೂಲಿ

೧೭೧೬. ಶ್ರೀ ನೀಲಕಂಠಗೌಡ ವಿ. ಪಾಟೀಲ್ (ಶಿಗ್ಗಾಂವ).—ಮಾನ್ಯ ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲಾ ಹಿರಿಯೂರು ತಾಲ್ಲೂಕಿನಲ್ಲಿರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪ರ ಮೇಲಿರುವ ಸುವರ್ಣಮುಖಿ ಸೇತುವೆಯ ಮೇಲೆ ಹಾಯ್ದು ಹೋಗುವ ಎಲ್ಲಾ ವಾಹನಗಳಿಂದ ಕರ ವಸೂಲು ಮಾಡುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಯಾವ ಯಾವ ವಾಹನಗಳ ಮೇಲೆ ಎಷ್ಟೆಷ್ಟು ಕರ ವಸೂಲು ಮಾಡಲಾಗುತ್ತದೆ.

ಇ) ಪ್ರತಿ ದಿನಕ್ಕೆ ಎಷ್ಟು ಹಣ ಸಂದಾಯವಾಗುತ್ತದೆ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಗಮನಕ್ಕೆ ಬಂದಿದೆ.

ಆ) ಸದರಿ ಸೇತುವೆಯ ಮೇಲೆ ವಿವಿಧ ವಾಹನಗಳಿಗೆ ವಸೂಲಿ ಮಾಡುತ್ತಿರುವ ಸೇತುವೆ ಶುಲ್ಕ ದರ ಈ ರೀತಿ ಇದೆ —

ಎ) ಮೋಟಾರು ಸೈಕಲು, ಸ್ಕೂಟರು ಆಥವಾ ಯಾವುದೇ ಯಂತ್ರಚಾಲಿತ ವಾಹನ ರೂ.—೦—೫೦.

ಬಿ) ಮೋಟಾರು, ಕಾರು, ಜೀಪು, ಟ್ಯಾಕ್ಸಿ, ಪಿಕಪ್ ವ್ಯಾನ್, ಸ್ಟೇಶನ್ ವ್ಯಾಗನ್ನು ಟೆಂಪೋ, ಆಟೋರಿಕ್ಷಾಗಳು, ಮೂರು ಚಕ್ರದ ಸ್ಕೂಟರುಗಳು ಅಥವಾ ಸ್ವಯಂ ಚಾಲಿತ ಹಗುರ ವಾಹನಗಳು.

೧) ಟ್ರೇಲರು ರಹಿತ —ರೂ. ೨–೦೦.

೨) ಟ್ರೇಲರು ಸಹಿತ —ರೂ. ೩–೦೦.

ಸಿ) ೧) ಬಸ್ಸು, ಟ್ರಕ್ಕುಗಳು ಮತ್ತು ಇತರ ಭಾರಿ ವಾಹನಗಳು, ಟ್ರಾಕ್ಟರು ಟ್ರೈಲರು ಜೋಡಿ, ಮಾಲು, ಪ್ರಯಾಣಿಕರು–ಸಹಿತರೂ. ೬–೦೦.

೨) ಬಸ್ಸು, ಟ್ರಕ್ಕುಗಳು ಮತ್ತು ಇತರ ಭಾರಿ ವಾಹನಗಳು ಮಾಲು. ಪ್ರಯಾಣಿಕರ ರಹಿತ (ಖಾಲಿ)–ರೂ. ೩–೦೦.

ಡಿ) ಮೇಲೆ ನಮೂದಿಸಲ್ಪಡದ ಯಂತ್ರ ಚಾಲಿತ ವಾಹನಗಳು, ಉದಾಹರಣೆ.—

ಚಾಲಿತ ಕ್ರೇನು (ಭಾರ ಎತ್ತುವ ಯಂತ್ರ ವಾಹನ) ಡೋಜರುಗಳು—ಮಣ್ಣು ಎತ್ತಿ ಹಾಕುವ ಯಂತ್ರಗಳು–ರೋಡ್ ರೋಲ್ಲರಗಳು ಮಾಲು ಸಹಿತ, ಮಾಲು ರಹಿತ–ರೂ. ೬–೦೦.

೩) ಸರಾಸರಿ ದಿನವಹಿ ರೂ. ೧೧,೪೦೦–೦೦ ಗಳಷ್ಟು ಸೇತುವೆ ಕರ ವಸೂಲಿಯಾಗುತ್ತಿದೆ.

ಶ್ರೀ ನೀಲಕಂಠೇಗೌಡ ವಿ. ಪಾಟೀಲ್.— ಮಾನ್ಯ ಮಂತ್ರಿಗಳು ಸರಾಸರಿ ದಿನವಹಿ ೧೧,೪೦೦–೦೦ ರೂಗಳಷ್ಟು ಸೇತುವೆ ಕರ ವಸೂಲಿಯಾಗುತ್ತಿದೆ ಎಂದು ಕೊಟ್ಟಿದ್ದಾರೆ, ಇದು ಬಹಳ ಶೋಚನೀಯ. ಏಕೆಂದರೆ ಅರ್ಧ ತಾಸು ರೋಡ್ ಬ್ಲಾಕ್ ಆದರೆ ಸಾವಿರಾರು ವಾಹನಗಳು ನಿಲ್ಲುತ್ತವೆ. ಇದನ್ನು ನೋಡಿದರೆ ದಿನಂಪ್ರತಿ ೧೯೦೦ ವಾಹನಗಳು ಓಡಾಡುತ್ತವೆ ಎಂದು ಅರ್ಥವಾಗುತ್ತದೆ. ಕೆ.ಎಸ್. ಆರ್.ಟಿ.ಸಿ, ಬಸ್‌ನವರಿಗೆ ಮಾತ್ರ ರಿಸಿಟ್ ಕೊಡುತ್ತಾರೆ, ಆದರೆ ಲಾರಿಗಳವರು ರಿಸಿಟ್ ಇಲ್ಲದೆ ಹಾಗೇ ಹೋಗುತ್ತಾರೆ. ಹೀಗಾಗಿ ಬಹಳ ಹಣ ಸೋರುವಿಕೆಯಾಗುತ್ತದೆ. ಈ ಸೋರುವಿಕೆಯನ್ನು ತಡೆಗಟ್ಟಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಇದರ ಬಗ್ಗೆ ಸರ್ಕಾರ ಯೋಗ್ಯವಾದಂಥ ಕ್ರಮ ತೆಗೆದು ಕೊಳ್ಳುತ್ತದೆ.

ಶಿವಮೊಗ್ಗ ತಾಲ್ಲೂಕಿನ ನಿಧಿಗೆ ಹೊಬಳಿಯಲ್ಲಿ ಸಣ್ಣ ಮತ್ತು ಮಧ್ಯಮ ನೀರಾವರಿ ಕಾಮಗಾರಿಗಳ ಬಗ್ಗೆ.

೧೪೫೭. ಶ್ರೀ ಕೆ. ಹೆಚ್. ಶ್ರೀನಿವಾಸ (ಶಿವಮೊಗ್ಗ).—ಮಾನ್ಯ ಲೋಕೋಪಯೋಗಿ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ತಾಲ್ಲೂಕು ನಿಧಿಗೆ ಹೊಬಳಿಯಲ್ಲಿ ಅನ್ವೇಷಣೆ ಮಾಡಿ, ಫೀಸಿಬಲ್ ಆಗಿರುವ ಸಣ್ಣ ಮತ್ತು ಮಾಧ್ಯಮ ನೀರಾವರಿ ಕೆಲಸಗಳು ಎಷ್ಟು ?

ಆ) ಅವುಗಳ ನಾಮಾವಳಿ, ಅಂದಾಜುಗಳು, ಯೋಜನೆಯಿಂದ ಒಳಪಡುವ ಅಚ್ಚುಕಟ್ಟು ಮತ್ತು ಇತರೆ ಮಾಹಿತಿಗಳನ್ನು ಒದಗಿಸುವುದು ?

ಇ) ಈ ಯೋಜನೆಗಳನ್ನು ಆರಂಭಿಸುವ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದು ಕೊಂಡಿದ್ದಾರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಯಾವ ಮಧ್ಯಮ ನೀರಾವರಿ ಯೋಜನೆಯ ಅನ್ವೇಷಣೆ ನಡೆದಿಲ್ಲ. ಅನ್ವೇಷಣೆ ಮಾಡಿದ ಎರಡು ಸಣ್ಣ ನೀರಾವರಿ ಕೆಲಸಗಳು ಇನ್‌ಫೀಸಿಬಲ್ ಎಂದು ಕಂಡುಬಂದಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.